ಹೊಸ ಫ್ಲಡ್‌ಫ್ಲೋ ಕಾಲುವೆ ನಿರ್ಮಾಣ ಮಾಡುವುದು

2006 (2623); ಶ್ರೀ ಬಾದರ್ಲಿ ಹಂಪನಗೌಡ

ಅ) ಬಚಾವತ್ ಆಯೋಗದ ಆದೇಶದ ಪ್ರಕಾರ ತುಂಗಭದ್ರಾ ಜಲಾಶಯದ 139 ಟಿ.ಎಂ.ಸಿ. ನೀರನ್ನು ಉಪಯೋಗಿಸಲು ರಾಜ್ಯಕ್ಕೆ ಹಕ್ಕಿದೆಯೇ;

ಆ) ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವ 34 ಟಿ.ಎಂ.ಸಿ. ನೀರಿನಲ್ಲಿ 22 ಟಿ.ಎಂ.ಸಿ. ನೀರನ್ನು ರಾಜ್ಯವು ಉಪಯೋಗಿಸಲು ಕಾನೂನಿನಡಿ ಅವಕಾಶವಿದೆಯೇ;

ಇ) ಹಾಗಿದ್ದಲ್ಲಿ, 22 ಟಿ.ಎಂ.ಸಿ. ನೀರನ್ನು ಹೊಸ ಫ್ಲಡ್‌ಫ್ಲೋ ಕಾಲುವೆ ಮಾಡಿ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರವು ಚಿಂತಿಸಿದೆಯೇ?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಹೌದು

ಆ) ಕೃಷ್ಣಾ ಜಲ ವಿವಾದ ನ್ಯಾಯಧಿಕರಣ–Iರ (ಬಚಾವತ್ ನ್ಯಾಯಧಿಕರಣ) ವರದಿಯನುಸಾರ ತುಂಗಭದ್ರಾ ಯೋಜನೆಯು ಜಂಟಿ ಯೋಜನೆಯಾಗಿದೆ.

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದ ಕಡಿಮೆ ಆಗಿರುವ ನೀರಿನ ಪ್ರಮಾಣದ ಬಳಕೆಯು ಎಲ್ಲಾ ಸಂಬಂಧಿತ ರಾಜ್ಯಗಳಿಗೂ ಅನ್ವಯವಾಗುತ್ತಿದ್ದು, ಮೂಲ ಹಂಚಿಕೆಯಂತೆ ಉಪಯೋಗಿಸಲು, ಪರ್ಯಾಯಗಳ ಬಗ್ಗೆ ನಿರ್ಧಾರಕ್ಕೆ ಬರಬೇಕಾಗುತ್ತದೆ. ಮಾರ್ಗೋಪಾಯಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮಧ್ಯೆ ಒಪ್ಪಂದವಾಗಬೇಕಾಗುತ್ತದೆ ಮತ್ತು ತುಂಗಭದ್ರಾ ಮಂಡಳಿಯ ಅನುಮೋದನೆ ಬೇಕಾಗುತ್ತದೆ.

ಇ) ತುಂಗಭದ್ರಾ ಜಲಾಶಯವನ್ನು ಮೂಲ ಸಾಮರ್ಥ್ಯಕ್ಕೆ ಮರುಸ್ಥಾಪಿಸಲು ಪರ್ಯಾಯಗಳ ಬಗ್ಗೆ ಅಧ್ಯಯನ ನಡೆಸಿ, ಯೋಜನಾ ವರದಿಯನ್ನು ಸಿದ್ಧಪಡಿಸಲು Global Expression of Interestನ್ನು ಕರೆಯಲಾಗಿದೆ. ಪೂರ್ವಾರ್ಹತೆಗಳನ್ನು ನಿಗದಿಪಡಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ನೀರಾವರಿ ಯೋಜನೆಗಳು

2007 (2624); ಶ್ರೀ ಬಾದರ್ಲಿ ಹಂಪಗೌಡ

ಅ) ಶ್ರೀ ಬ್ರಿಜೇಶ್ ಕುಮಾರ್ ಆಯೋಗದ ಆದೇಶದ ಪ್ರಕಾರ 133 ಟಿ.ಎಂ.ಸಿ. ನೀರನ್ನು ರಾಜ್ಯ ಸರ್ಕಾರ ನೀರಾವರಿ, ಕುಡಿಯುವ ನೀರು ಮತ್ತು ಕಾರ್ಖಾನೆಗಳಿಗೆ ಉಪಯೋಗಿಸುವ ನಿಟ್ಟಿನಲ್ಲಿ ನೀರಾವರಿ ಇಲಾಖೆ ರೂಪಿಸಿರುವ ಯೋಜನೆಗಳಾವುವು ಹಾಗೂ ಆ ಯೋಜನೆಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ನೀರಿನ ಪ್ರಮಾಣ ನಿಗದಿಪಡಿಸಲಾಗಿದೆ? (ವಿವರ ನೀಡುವುದು)

ಶ್ರೀ ಎಂ.ಬಿ. ಪಾಟೀಲ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) **ಮತ್ತು ಆ)** ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–II (ಬ್ರಿಜೇಶ್ ಕುಮಾರ್ ನ್ಯಾಯಾಧೀಕರಣ)ವು ನೀರಾವರಿ ಯೋಜನೆಗಳಿಗೆ 166 ಟಿಎಂಸಿ ಹಾಗೂ ನದಿಯಲ್ಲಿನ ಕನಿಷ್ಠ ಹರಿವಿಗೆ 7.0 ಟಿಎಂಸಿ, ಒಟ್ಟಾರೆ 173.00 ಟಿಎಂಸಿ ನೀರನ್ನು ರಾಜ್ಯಕ್ಕೆ ಹಂಚಿಕೆ ಮಾಡಿದೆ.

166 ಟಿಎಂಸಿ ನೀರನ್ನು ಈ ಕೆಳಗಿನ ನೀರಾವರಿ ಯೋಜನೆಗಳಿಗೆ ಹಂಚಿಕೆ ಮಾಡಲಾಗಿದೆ:

1. ಕೃಷ್ಣಾ ಮೇಲ್ದಂಡೆ ಯೋಜನೆ (3ನೇ ಹಂತ) – 130 ಟಿಎಂಸಿ
2. ತುಂಗಾ ಮೇಲ್ದಂಡೆ ಯೋಜನೆ – 11 ಟಿಎಂಸಿ
3. ಭದ್ರಾ ಮೇಲ್ದಂಡೆ ಯೋಜನೆ – 9 ಟಿಎಂಸಿ
4. ಸಿಂಗಟಲೂರು ಏತ ನೀರಾವರಿ ಯೋಜನೆ – 16 ಟಿಎಂಸಿ